ಸೋಯಾಅವರೆ ಸಮಗ್ರ ಬೆಳೆ ನಿರ್ವಹಣೆ



ತಳಿಗಳು :

ಡಿಎಸ್‌ಬಿ 21 : ಅಧಿಕ ಇಳುವರಿ, ತುಕ್ಕು ನಿರೋಧಕತೆ ಹೊಂದಿದೆ.
90–95 ದಿನಗಳಲ್ಲಿ ಕೊಯ್ಲಿಗೆ ಬರುತ್ತದೆ. ಮಾಗಿದ 8–10 ದಿನಗಳ ನಂತರ ಕೊಯ್ಲು ಮಾಡುವುದು ತಡವಾದಲ್ಲಿ ಕಾಳು ಸಿಡಿಯುವುದಿಲ್ಲ
ಜೆಎಸ್ 93–05: ಅಧಿಕ ಇಳುವರಿ ನೇರಳೆ ಬಣ್ಣದ ಬೀಜ ರೋಗಕ್ಕೆ ನಿರೋಧಕ ಶಕ್ತಿ ಹೊಂದಿದೆ
80–85 ದಿನಗಳಲ್ಲಿ ಕೊಯ್ಲಿಗೆ ಬರುತ್ತದೆ.

ಸಾವಯವ ಗೊಬ್ಬರ :

2.5 ಟನ್ ಕೊಟ್ಟಿಗೆ ಗೊಬ್ಬರವನ್ನು ಬಿತ್ತನೆ ಮಾಡುವ 2–3 ವಾರಗಳ ಮುಂಚೆ ಮಣ್ಣಿನಲ್ಲಿ ಬೆರೆಸಬೇಕು



ಬೀಜೋಪಚಾರ :

ಬಿತ್ತನೆ ಬೀಜಗಳನ್ನು 500 ಗ್ರಾಂ ರೈಜೋಬಿಯಂ ಮತ್ತು 500 ಗ್ರಾಂ ರಂಜಕ ಕರಗಿಸುವ ಜೈವಿಕ ಗೊಬ್ಬರಗಳೊಂದಿಗೆ ಬೀಜೋಪಚಾರ ಮಾಡಿ ಬಿತ್ತನೆ ಮಾಡಬೇಕು. ಈ ಕ್ರಮದಿಂದ ಸಾರಜನಕ ಹಾಗೂ ರಂಜಕ ಲಭ್ಯವಾಗಿ ಉತ್ತಮ ಬೆಳೆ ಹಾಗೂ ಇಳುವರಿ ಪಡೆಯಬಹುದು

ರಾಸಾಯನಿಕ ಗೊಬ್ಬರಗಳು :

- ಎಕರೆಗೆ 38 ಕಿ.ಗ್ರಾಂ 10:26:26 ಕಾಂಪ್ಲೆಕ್ಸ್, 26 ಕಿ.ಗ್ರಾಂ ಯೂರಿಯಾ ಮತ್ತು 136 ಕಿ.ಗ್ರಾಂ ಸಿಂಗಲ್ ಸೂಪರ್ ಫಾಸ್ಫೇಟ್ ಅಥವಾ
- 48 ಕಿ.ಗ್ರಾಂ ಡಿಎಪಿ, 8 ಕಿ.ಗ್ರಾಂ ಯೂರಿಯಾ, 16 ಕಿ.ಗ್ರಾಂ ಪೊಟ್ಯಾಷ್ ಬಿತ್ತನೆ ಸಮಯದಲ್ಲಿ ನೀಡಬೇಕು

ಲಘು ಪೋಷಕಾಂಶಗಳು :

ಬಿತ್ತನೆಗೆ ಮೊದಲು 8 ಕಿ.ಗ್ರಾಂ ಬೆಳೆಪ್ರಚೋದಕ ಬಯೋಜೈಮ್ ಜೈವಿಕಗೊಬ್ಬರವನ್ನು ಮಣ್ಣಿಗೆ ಬೆರೆಸಿ ನಂತರ 5 ಕಿ.ಗ್ರಾಂ ಜಿಂಕ್ ಸಲ್ಫೇಟ್ ಮತ್ತು 40 ಕಿ.ಗ್ರಾಂ ಜಿಪ್ಸಂ ಮಣ್ಣಿಗೆ ಬೆರೆಸಬೇಕು. ಈ ಕ್ರಮದಿಂದ ಬೆಳವಣಿಗೆ ಉತ್ತಮಗೊಳ್ಳುವುದಲ್ಲದೇ ಕಾಳಿನಲ್ಲಿ ಎಣ್ಣೆಯ ಅಂಶ ಹೆಚ್ಚಾಗುವುದು.

ಪೋಷಕಾಂಶಗಳ ಸಿಂಪರಣೆ :

- ಬೆಳೆ ಹೂವಾಡಿದ 15 ದಿನಗಳ ನಂತರ 10 ಗ್ರಾಂ ಪೊಟ್ಯಾಷಿಯಂ ನೈಟ್ರೇಟ್ ಪ್ರತಿ ಲೀಟರ್ ನೀರಿಗೆ ಸಿಂಪಡಿಸಬೇಕು. ಇದರಿಂದ ಇಳುವರಿ ಹೆಚ್ಚಾಗುವುದು.
- ಶೇ. 2ರ ಯೂರಿಯಾ ದ್ರಾವಣವನ್ನು (20 ಗ್ರಾಂ ಯೂರಿಯಾವನ್ನು 1 ಲೀಟರ್ ನೀರಿನಲ್ಲಿ ಕರಗಿಸುವುದು), ಶೇ. 50 ರಷ್ಟು ಬೆಳೆ ಹೂವಾಡುವಾಗ ಸಿಂಪರಣೆ ಮಾಡುವುದರಿಂದ ಪೂರ್ಣವಾಗಿ ಕಾಳುಗಳು ತುಂಬಿ ಇಳುವರಿ ಹೆಚ್ಚಾಗುವುದು

ಮಿಶ್ರ ಹಾಗೂ ಅಂತರ ಬೆಳೆಗಳು:

- ತೊಗರಿ + ಸೋಯಾಅವರೆ (2:4)
- ಹೈಬ್ರಿಡ್ ಹತ್ತಿ + ಸೋಯಾಅವರೆ (1:2)
- ಗೋವಿನ ಜೋಳ + ಸೋಯಾಅವರೆ (1:2)
- ರಾಗಿಯೊಡನೆ ಮಿಶ್ರ ಬೆಳೆ
- ಕಬ್ಬಿನೊಡನೆ ಮಿಶ್ರ ಬೆಳೆ

ಕಳೆ ನಿರ್ವಹಣೆ:

ಬಿತ್ತನೆಯಾದ ದಿನ ಅಥವಾ ಮರುದಿನ 5.3 ಮಿಲಿ ಅಲಾಕ್ಲೋರ್ 50 ಇ.ಸಿ. ಅಥವಾ 4.3 ಮಿಲಿ ಪೆಂಡಿಮಿಥಲಿನ್ 30 ಇ.ಸಿ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪರಿಸಬೇಕು. ಎಕರೆಗೆ 300 ಲೀಟರ್ ನೀರಿನ ಪ್ರಮಾಣ ಬೇಕಾಗುವುದು. ನಂತರ 20–25 ದಿನಗಳ ಅವಧಿಯಲ್ಲಿ ಒಂದು ಸಾರಿ ಅಂತರ ಬೇಸಾಯ ಮಾಡಬೇಕು.

ಸಸ್ಯ ಸಂರಕ್ಷಣೆ :

- ಕಾಂಡ ಕೊರೆಯುವ ನೊಣದ ಹತೋಟಿಗೆ 0.2 ಮಿ.ಲೀ. ಇಮಿಡಾಕ್ಲೋಪ್ರಿಡ್ 17.8 ಎಸ್. ಎಲ್ ಸಿಂಪರಣೆ ಮಾಡಬೇಕು
- ಸ್ಪೊಡೆಪ್ಟೆರಾ ಕೀಟ ಹತೋಟಿಗೆ ಬಿಟಿ ದುಂಡಾಣು ಸಿಂಪರಣೆ, ಎರಡನೆ ಕ್ರಮವಾಗಿ ಟ್ರೈಜೋಫಾಸ್ (2 ಮಿ.ಲೀ) ಸಿಂಪರಣೆ ಮಾಡಬೇಕು

- ಎಲೆ ತಿನ್ನುವ ಕೀಟ ಹತೋಟಿಗೆ ಕ್ವಿನಾಲ್‌ಫಾಸ್ (2 ಮಿ.ಲೀ) ಸಿಂಪರಣೆ ಮಾಡಬೇಕು
- ಬೀಜ, ಸಸಿ ಹಾಗೂ ಬುಡ ಕೊಳೆರೋಗ ಹತೋಟಿಗೆ ಮುಂಜಾಗೃತ ಕ್ರಮವಾಗಿ ಬೀಜೋಪಚಾರವನ್ನು 2 ಗ್ರಾಂ ಕಾರ್ಬಾಕ್ಸಿನ್ ಅಥವಾ 3 ಗ್ರಾಂ/ಕಿ.ಗ್ರಾಂ ಬೀಜಕ್ಕೆ. ಥೈರಾಮ್‌ನಿಂದ ಬೀಜೋಪಚಾರ ಮಾಡಬೇಕು

ಇಳುವರಿ :

ಎಕರೆಗೆ ಕಾಳು 8–10 ಕ್ವಿಂಟಾಲ್ ಹಾಗೂ 4–6 ಕ್ವಿಂಟಾಲ್ ಮೇವಿನ ಇಳುವರಿ ಪಡೆಯಬಹುದು.